## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1324**

**ಸದಸ್ಯರ ಹೆಸರು** : **ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ)**

**ಉತ್ತರಿಸುವ ದಿನಾಂಕ** : **17.12.2025**

**ಉತ್ತರಿಸುವ ಸಚಿವರು** : **ಕಂದಾಯ ಸಚಿವರು**

| **ಕ್ರ. ಸಂ.** | **ಪ್ರಶ್ನೆ** | **ಉತ್ತರ** |
|---|---|---|
| (ಅ) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಕೋಣಸಾಲೆ ಗ್ರಾಮದ ಸರ್ವೇ ನಂಬರ್ 31ರ ಜಮೀನು ಯಾರಿಗೆ, ಯಾವ ಯಾವ ಸಾಲಿನಲ್ಲಿ ಮಂಜೂರು ಆಗಿರುತ್ತದೆ; (ಸಂಪೂರ್ಣವಾದ ವಿವರ ನೀಡುವುದು) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕೊಪ್ಪ ಹೋಬಳಿ ಕೋಣಸಾಲೆ ಗ್ರಾಮದ ಸ.ನಂ. 31ರ ಜಮೀನು ವಿವಿಧ ಸಾಲುಗಳಲ್ಲಿ ಮಂಜೂರಾಗಿರುವ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| (ಆ) | ಸರ್ವೇ ನಂಬರ್ 31ರ ಪೈಕಿ 349 ಎಂದು ದುರಸ್ತಿಯಾಗಿರುವುದು ನಿಜವೆ; ಯಾವಾಗ ದುರಸ್ತಿ ಆಗಿರುತ್ತದೆ; (ಸಂಪೂರ್ಣವಾದ ವಿವರ ನೀಡುವುದು) | ಸ.ನಂ. 31ರ ಪೈಕಿ 349 ಎಂದು ದಿನಾಂಕ: 13.03.1956ರಂದು ದುರಸ್ತಿಯಾಗಿರುತ್ತದೆ. ವಿವರವನ್ನು **ಅನುಬಂಧ-1ರ ಕ್ರಮ ಸಂಖ್ಯೆ:114**ರಲ್ಲಿ ನೀಡಲಾಗಿದೆ. |
| (ಇ) | ಸದರಿ ಸರ್ವೇ ನಂಬರ್ 349 ಯಾವ ಸಾಲಿನಲ್ಲಿ, ಯಾರಿಗೆ, ಯಾವ ಆಧಾರದ ಮೇಲೆ ದುರಸ್ತಿಯಾಗಿರುತ್ತದೆ? (ಮಾಹಿತಿಯನ್ನು ನೀಡುವುದು) | ಲಭ್ಯವಿರುವ ಸರ್ವೆ ಇಲಾಖೆಯ ಪಕ್ಕಾ ದಾಖಲೆಯ ಆಧಾರದಲ್ಲಿ ಸ.ನಂ. 349 ದಿನಾಂಕ: 13.03.1956ರಂದು ಶ್ರೀ ಪಿ. ಸಿದ್ದಪ್ಪ ಎಂಬುವವರಿಗೆ ದುರಸ್ತಿಯಾಗಿರುತ್ತದೆ (**ಅನುಬಂಧ-2**). |

(ಕಡತ ಸಂಖ್ಯೆ: ಆರ್‌ಡಿ 53 ಎಲ್‌ಜಿವೈ 2025)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು